ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಜಾರಿ ಕುರಿತು

679 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಅವಾವ್ಯಪ್ತಿಯಿಂದ ಸತತ ಹಾನಿಗೊಳಗಾಗುತ್ತಿರುವ ಧಾರವಾಡ ಜಿಲ್ಲೆಯ(1)ಹಿರೇಕೆರೂರು (2)ರಾಣೆಬೆನ್ನೂರು (3) ಹಾವೇರಿ ಹಾನಗಲ್ಲು ತಾಲ್ಲೂಕುಗಳ ರೈತರಿಗೆ ವರದಾನ ಆಗಬಲ್ಲದು ಎನ್ನುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಆ ಯೋಜನೆಯನ್ನು ಎರಡು ಸಾವಿರ ಇಸವಿಯೊಳಗಾಗಿ ಬಜಾವತ್ ತೀರ್ಪಿನ ಅನುಗುಣವಾಗಿ ಪೂರ್ಣಗೊಳಿಸಲು ಸರ್ಕಾರ ಯೋಚಿಸಿದೆಯೇ?

ಇ) ಆ ಬಗ್ಗೆ ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳೇನು?

ಈ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ?

ಉ) ಪ್ರಾರಂಭಿಸದಿದ್ದಲ್ಲಿ ನಿರ್ದಿಷ್ಟವಾಗಿ ಯಾವಾಗ ಪ್ರಾರಂಭಿಸಲಾಗುವುದು ಹಾಗೂ 93-94ರಲ್ಲಿ ಆ ಕಾಮಗಾರಿಗೆ ಒದಗಿಸಿದ ಮತ್ತು ಖರ್ಚು ಮಾಡಿದ ಹಣವೆಷ್ಟು?

ಊ) 94-95ರ ಆಯವ್ಯಯದಲ್ಲಿ ಆ ಯೋಜನೆಗೆ ಒದಗಿಸಲು ಉದ್ದೇಶಿಸಿರುವ ಹಣದ ಮೊತ್ತವೆಷ್ಟು?

ಋ) ರಾಜ್ಯದ ಯಾವ ಯಾವ ನೀರಾವರಿ ಯೋಜನೆಗಳನ್ನು ಕೇಂದ್ರದ ಮಂಜೂರಾತಿಗೆ ಕಳುಹಿಸಲಾಗಿದೆ?

ೠ) ಈವರೆಗೆ ಮಂಜೂರಾಗಿರುವ ಯೋಜನೆಗಳು ಯಾವುವು ಹಾಗೂ ಕೇಂದ್ರದ ಮಂಜೂರಾತಿ ಇಲ್ಲದೆ ಪ್ರಾರಂಭಿಸಿರುವ ಯೋಜನೆಗಳು ಯಾವುವು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಯವರು):

ಅ) ಹೌದು

ಆ) ಹೌದು.

ಇ) ಈ ಯೋಜನೆಯ ಪರಿಷ್ಕೃತ ಅಂದಾಜನ್ನು ಕೇಂದ್ರ ಜಲ ಆಯೋಗಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಈ) ಇಲ್ಲ.

ಉ) 1993-94ನೇ ಸಾಲಿನಲ್ಲಿ ಈ ಯೋಜನೆಗೆ 500 ಲಕ್ಷ ರೂ.ಗಳನ್ನು ಒದಗಿಸಿದ್ದು, ಪರಿಷ್ಕೃತ ಅನುದಾನ ರೂ.200 ಲಕ್ಷ ಫೆಬ್ರವರಿ ಮಾಹೆಯ ಅಂತ್ಯದವರೆಗೆ ರೂ. 111.62 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಊ) ಪರಿಶೀಲಿಸಲಾಗುತ್ತಿದೆ.

ಋ) ಮತ್ತು ೠ) ಲಗತ್ತಿಸಿರುವ ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.

ಅನುಬಂಧ

ವಿಧಾನಸಭಾ ಸದಸ್ಯರಾದ ಶ್ರೀ ಬಿ.ಹೆಚ್. ಬನ್ನಿಕೋಡ್ ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 679ಕ್ಕೆ ಉತ್ತರ.

ಅ) ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ಯೋಜನೆಗಳು

(ಕಾಮಗಾರಿಗಳನ್ನು ಪ್ರಾರಂಭಿಸಲಾಗದಿರುವ ಯೋಜನೆಗಳು)

1) ರಾಮತಾಳ್. ಏತ ನೀರಾವರಿ.
2) ಭೀಮ ನೀರಾವರಿ ಯೋಜನೆ
3) ಭೀಮ ಏತ ನೀರಾವರಿ.
4) ಕೃಷ್ಣ ಮೇಲ್ದಂಡೆ ಯೋಜನೆ ಎರಡನೇ ಹಂತ
5) ತುಂಬ ಮೇಲ್ದಂಡೆ ಯೋಜನೆ.

ಆ) ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ ಪ್ರಾರಂಭಿಸಲಾಗಿರುವ ಯೋಜನೆಗಳು

1) ವರಾಹಿ
2) ಹಾರಂಗಿ
3) ಹೇಮಾವತಿ
4) ಕಬಿನಿ
5) ಡಿ. ದೇವರಾಜ್ ಅರಸ ಕಾಲುವೆ
6) ಯಗಚಿ
7) ಅರ್ಕಾವತಿ
8) ಚಿಕ್ಕಿ ಹೊಳೆ
9) ಹುಚ್ಚನಕೊಪ್ಪಲು
10) ಇಗ್ಗಲೂರು
11) ಕಾಮಸಮುದ್ರ
12) ಉಡುತೊರೆಹಳ್ಳ
13) ಕಾಜೇನಹಳ್ಳಿ

ಕೊಡಗು ಜಿಲ್ಲೆಗೆ ಆರಾಧನ ಯೋಜನೆಗೆ ಮಂಜೂರಾದ ಹಣದ ವಿವರ ಕುರಿತು

608 - ಶ್ರೀಮತಿ ಸುಮಾ ವಸಂತ (ವಿರಾಜಪೇಟೆ): ಮಾನ್ಯ ಕಾನೂನು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಗೆ ಆರಾಧನಾ ಯೋಜನೆಯನ್ವಯ ಮಂಜೂರಾದ ಹಣ ಎಷ್ಟು?

ಆ) ಆ ಯೋಜನೆಯನ್ವಯ ಕಟ್ಟುವ ದೇವಸ್ಥಾನಗಳೆಷ್ಟು (ತಾಲ್ಲೂಕುವಾರು ವಿವರ ಕೊಡುವುದು)

ಇ) ಇಪ್ಪರವರೆಗೆ ಬಿಡುಗಡೆಯಾದ ಹಣವೆಷ್ಟು?

ಈ) ಮಾರ್ಚ್ 94ರ ಒಳಗಾಗಿ ಹಣ ಬಿಡುಗಡೆ ಮಾಡಲಾಗುವುದೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು):

ಅ) ರೂ. 17,32,855-00